MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.47 ENGLISH DAILY Subscription Yearly - Rs. - TUESDAY 25-1-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಕಚ್ಚಾ ಗೋಡಂಬಿ ಸೀಜನ್ ವಿಳಂಬ, ಉತ್ತರ ಭಾರತದಲ್ಲಿ ತೀವ್ರ ಚಳಿ, ಗೋಡಂಬಿ ತಿರುಳ ಬೇಡಿಕೆ ಹೆಚ್ಚಳ ಸಾಧ್ಯತೆ

ಮಳೆಗಾಲ ಬಹಳ ವಿಳಂಬಿತವಾಗಿ ಕೊನೆಗೊಂಡಿರುವುದು, ಹಾಗೂ ಕೆಲವಡೆ ಇತ್ತೀಚೆಗೆ ಮಳೆಯಾಗಿರುವುದರಿಂದ ಕಚ್ಚಾ ಗೋಡಂಬಿಯ ದೇಶೀ ಸೀಜನ್ ಈ ವರ್ಷ ವಿಳಂಬಿತಗೊಂಡಿದೆ. ಉತ್ತರ ಭಾರತದಲ್ಲಿ ತೀವ್ರ ಚಳಿಯ ವರದಿಯಾಗುತ್ತಿದ್ದು, ಇನ್ನು ಹಲವು ದಿವಸಗಳವರೆಗೆ ಅಲ್ಲಿ ತೀವ್ರ ಚಳಿ ಮುಂದುವರೆಯುವ ಸೂಚನೆಯಿದೆಯೆನ್ನಲಾಗಿದೆ. ಸಾಮಾನ್ಯವಾಗಿ ಉತ್ತರ ಭಾರತದಲ್ಲಿ ತೀವ್ರ ಚಳಿಯಿದ್ದಾಗ ಅಲ್ಲಿಂದ ಗೋಡಂಬಿಗೆ ಬೇಡಿಕೆ ಹೆಚ್ಚಳವಾಗುತ್ತಿದೆ. ಈ ವರ್ಷವೂ ಉತ್ತರ ಭಾರತದಿಂದ ಬೇಡಿಕೆ ಹೆಚ್ಚಳವಾಗುವ ಸಾಧ್ಯತೆಯಿದೆ.

## ಭಾರತದ ಖಾದ್ಯ ತೈಲ ಆಮದು ಬೇಡಿಕೆ ಪಾಮೆಣ್ಣೆಯಿಂದ, ಸೋಯಾಬೀನ್, ಸೂರ್ಯಕಾಂತಿ ಎಣ್ಣೆಗಳಿಗೆ ಪರಿವರ್ತನೆ ಸಾಧ್ಯತೆ

ಇಂಡೋನೇಶೀಯಾದ ಪಾಮೆಣ್ಣೆ ರಫ್ತು ಕಡಿತ, ಪಾಮೆಣ್ಣೆ ಅಂತರಾಷ್ಟ್ರೀಯ ದರ ಹೆಚ್ಚಳದಿಂದ ಪಾಮೆಣ್ಣೆಗೆ ಭಾರತದ ಬೇಡಿಕೆ ಇಳಿಕೆಯಾಗಿ ಸೂರ್ಯಕಾಂತಿ ಎಣ್ಣೆ ಹಾಗೂ ಸೋಯಬೀನ್ ಎಣ್ಣೆಗಳಿಗೆ ಆಮದು ಬೇಡಿಕೆ ಪರಿವರ್ತನೆ ಹೊಂದಬಹುದೆನ್ನಲಾಗಿದೆ. ಪಾಮೆಣ್ಣೆ ಹಾಗೂ ಸೋಯಬೀನ್, ಸೂರ್ಯಕಾಂತಿ ಎಣ್ಣೆಗಳ ಅಂತರಾಷ್ಟ್ರೀಯ ದರಗಳ ವ್ಯತ್ಯಾಸ ಕಡಿಮೆಯಾಗಿರುವುದರಿಂದ, ಸೂರ್ಯಕಾಂತಿ ಹಾಗೂ ಸೋಯಾ ಎಣ್ಣೆಗಳ ಆಮದು ಬೇಡಿಕೆ ಹೆಚ್ಚಳವಾಗಬಹುದೆಂಬ ಬೇಡಿಕೆ ಹೆಚ್ಚಳಕ್ಕೆ ಕಾರಣವಾಗಬಹುದೆನ್ನಲಾಗಿದೆ.

## ಬೇಳೆಕಾಳು ದರ ಮಿಶ್ರ ಪ್ರತಿಕ್ರಿಯೆ

ಹಿಂದಿನ ವಾರ ಉತ್ತಮ ಬೇಡಿಕೆಯಿಂದ ತೊಗರಿ, ಹೆಸರುಕಾಳು ದರಗಳು ಸ್ವಲ್ಪ ಮಟ್ಟಿಗೆ ಉತ್ತಮಗೊಂಡಿದೆ ಹಾಗೂ ಉದ್ದು, ಉದ್ದಿನಬೇಳೆ, ಕಡ್ಲೆ ಬೇಳೆ ದರಗಳು ದುರ್ಬಲಗೊಂಡಿದೆ. ಪೂರೈಕೆ ಉತ್ತಮವಾಗಿದ್ದು ಹೊಸ ಬೆಳೆಯ ಪ್ರದೇಶ ಹೆಚ್ಚಳದಿಂದ ಉತ್ಪಾದನೆಯೂ ಉತ್ತಮವಿದೆಯೆನ್ನಲಾಗಿದ್ದು, ಹೆಚ್ಚಿನ ದರ ಹೆಚ್ಚಳದ ನಿರೀಕ್ಷೆಯಿಲ್ಲವೆನ್ನಲಾಗಿದೆ.